**ದಿನಾಂಕ:15-12-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಸಿ.ಎಸ್.ಹೆಚ್. ರವರಿಂದ:-**

ನಮ್ಮ ಮನೆ ಸಂಖ್ಯೆ ನನಗೆ ಹೇಳಲಾಗುವುದಿಲ್ಲ , ನಾನು ಶಾಲೆ ಕಲಿತಿಲ್ಲ ಎನ್ನುತ್ತಾರೆ. ನಿಮ್ಮ ಮನೆಯ ಉದ್ದ ಮತ್ತು ಅಗಲದ ಕ್ಷೇತ್ರವನ್ನು ತೋರಿಸಲು ದಾಖಲೆಗಳನ್ನು ಹಾಜರುಪಡಿಸುತ್ತೇನೆ ಎಂದು ಹಿಂದಿನ ನನ್ನ ಪಾಟೀ ಸವಾಲಿನಲ್ಲಿ ತಿಳಿಸಿದ್ದೆ , ಈಗ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ನಾನು ಈಗಾಗಲೇ ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ದಾವಾ ಸ್ವತ್ತು ಗುಡದೇವಗೋಳ ಓಣಿಯಲ್ಲಿದೆ ಎಂದರೆ ಸರಿ. ನನ್ನ ಮನೆಯ ಉದ್ದ 300 ಅಡಿ, ಅಗಲ 20 ಅಡಿ ಇದೆ ಎನ್ನುತ್ತಾರೆ. ಅಷ್ಟು ಅಳತೆ ಇದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯ ಹಿಂದೆ ಬೇರೆಯವರ ಮನೆಗಳು ಇವೆ ಎಂದರೆ ಸರಿ, ಸಾಕ್ಷಿ ಶಿವಾಜಿ ರವರು ನನ್ನ ಜಾಗದಲ್ಲಿಯೇ ಮನೆ ಕಟ್ಟಿದ್ದಾರೆ ಎನ್ನುತ್ತಾರೆ.

**2.** ಪಾರ್ವತಿ ಹುಲಿಕಾಯಿ ರವರಿಗೆ ಗ್ರಾಮ ಪಂಚಾಯಿತಿಯಿಂದ ಮಂಜೂರಾಗಿದೆ ಎಂದರೆ ಸಾಕ್ಷಿ ಅದು ನನ್ನ ಜಾಗ , ಪಂಚಾಯಿತಿಯವರು ಹೇಗೆ ಮಂಜೂರು ಮಾಡುತ್ತಾರೆ ಎನ್ನುತ್ತಾರೆ. ಆ ಮನೆಯನ್ನು ಅವರು 2007 ರಲ್ಲಿ ಕಟ್ಟಿದ್ದಾರೆ ಎಂದರೆ ಸಾಕ್ಷಿ ಆದ್ದರಿಂದಲೇ ನಾನು ದಾವೆ ಹೂಡಿದ್ದೇನೆ ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ಇನ್ನೂ ಎರಡು ಪ್ರಕರಣಗಳು ಬಾಕಿ ಇವೆ ಎನ್ನುತ್ತಾರೆ. 2007 ರಿಂದ ಮನೆ ಕಟ್ಟಿ ತೆರಿಗೆ ಪಾವತಿಸುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ. 2017 ರಲ್ಲಿ ಮನೆ ಕಟ್ಟಿದ್ದಾರೆ ಎಂದು ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ, ಸಾಕ್ಷಿ ಅವರು ನಮ್ಮನ್ನು ಹೊಡೆದು ಧಮಕಿಯಿಂದ ಮನೆ

ಕಟ್ಟಿದ್ದಾರೆ ಎನ್ನುತ್ತಾರೆ. ನನ್ನ ಮನೆ ಗುಡದಯ್ಯಗೋಳ ಓಣಿಯಲ್ಲಿದೆ, ಪ್ರತಿವಾದಿಯರ ಮನೆ ಗೋಕಾಖ್ ರಸ್ತೆಗೆ ಹೊಂದಿಕೊಂಡಿದೆ ಎಂದರೆ ಸಾಕ್ಷಿ ನನ್ನ ಜಾಗದಲ್ಲಿಯೇ ಅವರು ಮನೆ ಕಟ್ಟಿದ್ದಾರೆ ಎನ್ನುತ್ತಾರೆ. ನಾನು ಮನೆ ಕಟ್ಟಿದ ಜಾಗ 20X40 ಇದ್ದು ಆ ಪ್ರಕಾರ ಗ್ರಾಮ ಪಂಚಾಯಿತಿಯ ದಾಖಲೆಗಳಲ್ಲಿ ನಮೂದಾಗಿದೆ ಎಂದರೆ ಸಾಕ್ಷಿ ಆ ಪೂರ್ತಿ ಜಾಗ ನನ್ನದು ಎನ್ನುತ್ತಾರೆ. 20X40 ಕ್ಷೇತ್ರದಲ್ಲಿ ಮನೆಗೆ ಮಾತ್ರ ನಾನು ತೆರಿಗೆ ಕಟ್ಟಿದ್ದೇನೆ ಎಂದರೆ ಸರಿಯಲ್ಲ, ಸಾಕ್ಷಿ ಆ ಪೂರ್ತಿ ಜಾಗ ನನ್ನದು ಎನ್ನುತ್ತಾರೆ.

**3.** ನಿಪಿ-9 ನ್ನು ನಮ್ಮ ವಕೀಲರೇ ತಯಾರಿಸಿರುತ್ತಾರೆ. ನಾನು ಹೇಳಿದ ಮಾಹಿತಿಯಂತೆ ನಮ್ಮ ವಕೀಲರು ತಯಾರಿಸಿರುತ್ತಾರೆ ಎನ್ನುತ್ತಾರೆ. ನಿಪಿ-9 ನ್ನು ತಯಾರಿಸಲು ದಾಖಲಾತಿಗಳನ್ನು ವಕೀಲರಿಗೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಜಾಗ ನೋಡಿ ತಯಾರಿಸಿದ್ದಾರೆ ಎನ್ನುತ್ತಾರೆ. ನಾನು ಹಾಜರುಪಡಿಸಿದ ಪೋಟೋಗಳನ್ನು 2017 ರಲ್ಲಿ ತಯಾರಿಸಲಾಗಿದೆ ಎಂದರೆ ಸಾಕ್ಷಿ ನನಗೆ ವರ್ಷ ಹೇಳಲಾಗುವುದಿಲ್ಲ ಎನ್ನುತ್ತಾರೆ. ನಾನು ಪ್ರತಿವಾದಿಯರ ವಿರುದ್ಧ ಸುಳ್ಳು ಕ್ರಿಮಿನಲ್ ಪ್ರಕರಣವನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ, ಪ್ರತಿವಾದಿಯರು ನಮ್ಮನ್ನು ಹೊಡೆದಿದ್ದರಿಂದ ನಾನು ಅವರ ವಿರುದ್ಧ ಪ್ರಕರಣ ದಾಖಲಿಸಿದ್ದೇನೆ ಎನ್ನುತ್ತಾರೆ. ನಿಪಿ-2 ತೆರಿಗೆ ಪಾವತಿಸಿದ ರಶೀದಿ ಮನೆಗೆ ಸಂಬಂಧಿಸಿದ್ದು ಎಂದರೆ ಸರಿ. 2017 ರಲ್ಲಿ ಕಟ್ಟಿದ ತೆರಿಗೆ ಪಾವತಿ ರಶೀದಿಯನ್ನು ಮಾತ್ರ ಹಾಜರುಪಡಿಸಿದ್ದೇನೆ ಎಂದರೆ ಸರಿ . ಈ ದಾವೆಯನ್ನು ಹೂಡುವ ಸಲುವಾಗಿ ತೆರಿಗೆ ಪಾವತಿ ಮಾಡಿ ನಿಪಿ-2 ನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿಮ್ಮ ಮೈದುನನ ಜೊಯಿಡಾದಲ್ಲಿ ಇರುತ್ತಾರೆ ಎಂದು ಗೊತ್ತಿದ್ದರೂ ಸಹ ನಿಪಿ-21 ರಲ್ಲಿ ನಿಮ್ಮ ಮೈದುನನ ವಿಳಾಸವನ್ನು ಮುಚ್ಚಂಡಿ ಗ್ರಾಮ ಎಂದು ತೋರಿಸಿದ್ದೇನೆ ಎಂದರೆ ಸಾಕ್ಷಿ ಅವರು ಬಂದಿಲ್ಲ ಎನ್ನುತ್ತಾರೆ. ನಾನು ಮನೆ ಕಟ್ಟಿದ ಜಾಗ ಮಾತ್ರ ನನಗೆ ಸಂಬಂಧಿಸಿದ್ದು, ಅದಕ್ಕೆ ಮಾತ್ರ

ನಾನು ತೆರಿಗೆ ಪಾವತಿ ಮಾಡಿರುತ್ತೇನೆ ಎಂದರೆ ಸರಿಯಲ್ಲ, ಸಾಕ್ಷಿ ನಮ್ಮ ಜಾಗ ಎಷ್ಟು ಇದೆಯೋ ಅಷ್ಟಕ್ಕೂ ನಾನು ತೆರಿಗೆ ಕಟ್ಟಿದ್ದೇನೆ ಎನ್ನುತ್ತಾರೆ. ನನ್ನ ಜಾಗ 20X300 ಅಡಿ ಇದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು 2007 ರಲ್ಲಿ ಮನೆ ಕಟ್ಟಿದ್ದರೂ 2017 ರಲ್ಲಿ ಮನೆ ಕಟ್ಟುತ್ತಿದ್ದಾರೆ ಎಂದು ಅವರ ವಿರುದ್ಧ ಸುಳ್ಳು ಕ್ರಿಮಿನಲ್ ಪ್ರಕರಣ ಹೂಡಿ ಈ ದಾವೆಯನ್ನು ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗ್ರಾಮ ಪಂಚಾಯಿತಿಯವರು ನಿಮಗೆ ಇಷ್ಟೇ ಜಾಗ ಇದೆ ಎಂದು ಯಾವುದೇ ಜಾಗ ಮಂಜೂರು ಮಾಡಿ ಯಾವುದೇ ದಾಖಲೆ ನೀಡದೆ ಇದ್ದರೂ ಸಹ ನಾನು ಪ್ರತಿವಾದಿಯರ ವಿರುದ್ಧ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**